

ಬರಕೊಂತ ಕುಂತ್ವಿ. ಪಾತಿ ಅಳು ಮುಖ ನೋಡಿ ಪಾಪ ಅನ್ನಿಸಿದ್ರೂ ಏನೂ ಮಾತಾಡದೆ ಸುಮ್ಮನೆ ಕುಂತೆ.

ಅಷ್ಟೊತ್ತಿಗೆ ಕರೆಪ್ಪನ ಅಂಗಡಿತಾಕ ಶಾಂತಿ ಬಂದಿದ್ದು ನೋಡಿ, ಪಾತಿ ನಾನು ಮುಖಮುಖ ನೋಡಿಕೊಂಡು ಮತ್ತೆ ಬರ್‍ಯಾಕ ಶುರು ಮಾಡಿದ್ವಿ. ಮತ್ತೆ ಪಾತಿ ನನ್ನ ನೋಡುತ್ತಾ 'ಲೇ ಯಂಕಿ, ನೀ ಶಾಂತಿನ ಮಾತಾಡಸಗಲ್ಲನು? ಆಕಿ ಬಂದ್ರು ಸುಮ್ಮದಿಯಲ' ಅಂದಾಗ ಮನಸ್ಸೊಳಗೆ ಒಂಥರಾ ಅನ್ನಿಸಿತು. ಪಾತಿ ಮನೆಯಿಂದ ಬಂದಮೇಲೆ ಅದೇನೋ ತಪ್ಪು ಮಾಡಿನನೋ ಅಂತ ಹೊಟ್ಟ್ಯಾಗ ಸಂಕಟ ಆದಂಗಾತು. ಶಾಂತಿ ಮನೆಗ್ ಹೋಗಾದ್ ಬಿಟ್ಟು ಪಾತಿ ಮನಿಗ್ ಹೊಂಟಿನಿ, ಅವಳಿವತ್ತು ಅಂಗಡಿಗೆ ಬಂದ್ರು ಅವಳನ್ನ ಮಾತಾಡಿಸ್ಲಿಲ್ಲ ಅವಳೇನರ ಇದನ್ನ ಮಿಸ್ಸಿಗೇಳಿದ್ರ ಹೆಂಗ?! ಅಂತ ಯೋಚಿಸ್ತಾ 'ಬಂಕದಾಗಿಂದು ಕಸ ಒಡಿ' ಅಂತ ಅವ್ವ ಹೇಳಿದ್ದು ಮರೆತಿದ್ದೆ. ಬಡಾ ಬಡಾ ದೇವರ ಮನಿ, ಬಂಕ, ಅಂಗಳಗಸ ಹೊಡೆದು, ಅಂಗಳಕ್ಕ ನೀರಾಕಿ ದೇವರ ಪೂಜೆ ಮಾಡಿ ಶಾಂತಿ ಮನೆ ಕಡಿಗೆ ಓಡಿದೆ.

ಅವರ ಮನೆ ಹತ್ತಿರ ಆಗುತ್ತಿರುವಾಗಲೇ ಮೂಕಜ್ಜಿ ಬಡಗಿ ಹಿಡದು 'ಯಾರಬೇ ಅದು ಶ್ ಶ್ ಸುಡಗಾಡಿ ಬೆಕ್ಕಿರಬೊಕು ಎಲ್ಲಂದ್ರಲ್ಲಿ ವಲಸ ಮಾಡಿ ಹೊಕ್ಕೈತಿ ದಂಡೆರದ್ ದಾರಿಗಾಕ್ಲ' ಅಂತ ಬೈಯ್ಯುತ್ತಾ ಹೊರಗೆ ಬಂದು ನನ್ನ ಕೈ ಹಿಡಿದು 'ಅಲಲಲ ಯಂಕಿ ಎಲ್ಲಿಗ್ ಹೋಗಿದ್ದಿ ಸುಬ್ಬಿ ನಮ್ಮಂತ್ಯಾಕ ಬರಾದSS ಬುಟ್ಟಿಯಲ, ಶಾಂತಿ ಅಂತಿದ್ಲು ನೀ ಆ ಪಾತಿ ಜಂಟ್ಯಾಗಿ ಅಂತ'.

ಅಜ್ಜಿ ಮಾತು ಕೇಳಿ ಬೇಜಾರನ್ನಿಸಿ ಶಾಂತಿ ಹತ್ರ ಹೋದೆ. ಅವಳು ಸುಮ್ಮನೆ ಕೂತಿದ್ಲು. ನಾ ನನ್ನ ಕೈ ಮುಂದ್ ಮಾಡಿ 'ಸೈ ಮಾಡ್ತ್ಯಾ ಇಲ್ಲ ಟೂ ಬುಡ್ತ್ಯಾ' ಅಂದೆ. ಶಾಂತಿ ಮುಖ ನೋಡಿ ಸೈ ಅಂದು ನಕ್ಲು. ಆಗ ಎಲ್ಲಿಲ್ಲದ ಖುಷಿ ಅನ್ನಿಸಿದಂಗಾಗಿ ಇಬ್ರೂ ಆಣೆಕಲ್ಲಾಟ ಆಡಿದ್ವಿ. ಆಣೆಕಲ್ಲು ಕೈಲಿ ಹಿಡಿದು ಮೇಲೆ ತೂರುತ್ತಾ, 'ಲೇ ಯಂಕಿ ನೀ ಪಾತಿ ಮನಿಗ್ ಹೋಗಿದ್ಯಲ ಏನ್ ಮಾಡಿದ್ರಿ?'

'ಲೇ ಯವ್ವಾ ಏನ್ ಗೊತ್ತSS ಆ ಪಾತಿ ಅವರ ಮನಿ ಕತಿ ಹೇಳಾಕತಿದ್ಲು. ನೀನು ಒಮ್ಮೆ ಬಾ ಹೋಗಾಮ್. ಅವರ ಮನಿಮುಂದ ನೆಲ್ ಚೀಲ ರಾಶಿ ಹಾಕ್ಯಾರ. ಅದ್ರಮ್ಯಾಗ ಕುತ್ಗಂಡು ಬರಿಯಾಕ್ ಎಷ್ಟ್ ಮಸ್ತ್ ಇರತ್ ಗೊತ್ತನು, ಹಂಗ ಅವರ್ ಮನ್ಯಾಗ ಕೋಳಿಕುರಿ ಮಾಡ್ತಾರ, ಉಳದ್ರ ನಮಗೂ ತಿನ್ನಾಕ ಕೊಡ್ತಾರ, ಇಲ್ಲಂದ್ರ ಅದರ ವಾಸನಿನ ಕುಡಕಂಡು ಬರಾಮು' ಅಂದಾಗ

ಶಾಂತಿ ಕಣ್ಣರಳಿಸಿ 'ಹೌದನು...ಹ್ಞೂಂ ನಡಿ ನಾಳಿಗೆ ಅಲ್ಲೆ ಹೊಗಾಮ್ ಹೋಮರ್ಕ್ ಮಾಡಾಕ' ಅಂದು ಆಟ ಮುಂದುವರೆಸಿದಳು.

ಮರುದಿನ ಯಂಕಿ, ಪಾತಿ, ಶಾಂತಿ ಮೂವರು ಶಾಲೆಗೆ ಒಟ್ಟಾಗೆ ಹೋದರು. ಕಲ್ಲೂರಿನ ಸರ್ಕಾರಿ ಶಾಲೆ ಊರಿಂದ ಒಂದು ಮೈಲಿ ದೂರ ಇತ್ತು. ಹಂಚಿನ್ಯಾಳ ಮತ್ತೆ ಕಲ್ಲೂರಿಗಿದ್ದದ್ದು ಇದೊಂದೇ ಶಾಲೆ. ಎರಡೂ ಊರಿನ ಮಕ್ಕಳು ಇಲ್ಲಿಗೆ ಕಲಿಯೋಕೆ ಬರಬೇಕಿತ್ತು. ಯಂಕಿ ಅವ್ವ ರುಕ್ಕಮ್ಮ ಇದೇ ಸಾಲಿಯೊಳಗೆ ಅಡುಗೆ ಕೆಲಸ ಮಾಡುತ್ತಿದ್ಲು. ತನ್ನವ್ವ ಸಾಲಿಯೊಳಗೆ ಕೆಲಸ ಮಾಡುತ್ತಿದ್ದದ್ದು ಯಂಕಿಗೆ ಒಮ್ಮೊಮ್ಮೆ ಮುಜುಗರ ಅನ್ನಿಸಿ, 'ಯವಂಗೆ ನೀ ಯಾಕ್ ಸಾಲಿಗ್ ಕೆಲಸಕ್ಕ ಬರ್ತಿ. ಸಾಲ್ಯಾಗ ನನ್ನ್ ಫ್ರೆಂಡ್ಸ್ ಎಲ್ಲಾ ಅಣಕಸ್ತಾರ. ಈ ಸಾಲ್ಯಾಗ ಅಡಿಗಿ ಚೊಲೊ ಮಾಡಲ್ಲ ಅಡಗ್ಯಾರು. ಬ್ಯಾಳ್ಯಾಗೆಲ್ಲ ಬ್ಯಾಳಿ